ಶ್ರೀ ರಾಘವೇಂದ್ರ ಗುರುಸಾರ್ವಭೌಮ ವಿರಚಿತ

ಶ್ರೀಮನ್ಮಹಾಭಾರತ ತಾತ್ಪರ್ಯನಿರ್ಣಯ ಭಾವಸಂಗ್ರಹ

ಅನುವಾದ

ಜಿ. ಎಚ್. ಬಿ. ಆಚಾರ್ಯ

ಬೆಂಗಳೂರು

ಪ್ರಥಮ ಮುದ್ರಣ 1991

ಹಕ್ಕುಗಳು ಕಾದಿರಿಸಿದೆ

1000 ಪ್ರತಿಗಳು

ಬೆಲೆ : ಮೂರು ರೂಪಾಯಿ

ಮುದ್ರಣ
ಇಂಡಿಯನ್ ಪ್ರೆಸ್-ಬೆಂಗಳೂರು-560053

ವಿಜ್ಞಾಪನೆ

ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರು ಭಾರತ ಮತ್ತು ರಾಮಾಯಣದ ಸಂಶಯಾತ್ಮಕ ಕಥಾ ಭಾಗಗಳಿಗೆ ನಿರ್ಣಯಾತ್ಮಕ ವಿವರಣೆ ನೀಡಿ ಸಕಲ ಸಂಶಯಗಳನ್ನು ನಿವಾರಣೆ ಮಾಡಿ ವಿಬುಧ ಜನರಿಗೆ ಮಹೋಪಕಾರ ಮಾಡಿದ್ದಾರೆ ! ಆ ಮಹಾ ಕೃತಿಯೇ ಮಹಾಭಾರತ ತಾತ್ಪರ್ಯ ನಿರ್ಣಯ.

ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಪೂರ್ವಾಶ್ರಮದ ಪುತ್ರರಾದ ಲಕ್ಷ್ಮೀನಾರಾಯಣಾಚಾರ್ಯರು–ಆಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಪ್ರತಿದಿನ ಪಾರಾಯಣ ಮಾಡುವ ಪತ್ಪಂಪ್ರದಾಯವುಳ್ಳವರಾಗಿದ್ದರು. ಆದರೆ ದ್ವಾದಶಿಯ ದಿವಸ ತಾತ್ಪರ್ಯ ನಿರ್ಣಯ ಪಾರಾಯಣಕ್ಕೆ ಕಾಲಾವಕಾಶವಿಲ್ಲದೆ ತೊಂದರೆ ಆಯಿತು. ಇದನ್ನರಿತ ಗುರುರಾಜರು–ವಿಸ್ತಾರ ವಿಷಯವನ್ನು ಸಂಗ್ರಹವಾಗಿ ರಚಿಸುವುದರಲ್ಲಿ ಸಿದ್ಧಹಸ್ತರಾದ ರಾಯರು 32 ಅಧ್ಯಾಯಗಳ ತಾತ್ಪರ್ಯ ನಿರ್ಣಯಕ್ಕೆ 32 ಶ್ಲೋಕಗಳಲ್ಲಿ ರಚಿಸಿ–ಸಂಗ್ರಹಿಸಿ ಪಾರಾಯಣಕ್ಕೆ ಅನುಕೂಲವಾಗುವಂತೆ ಮಾಡಿ ಸರ್ವಸಜ್ಜನ ವೃಂದಕ್ಕೆ ಮಹೋಪಕಾರ ಮಾಡಿದ್ದಾರೆ !

ವೇದ ಮಂತ್ರಗಳಾಗಲಿ–ಸ್ತೋತ್ರಗಳಾಗಲಿ–ಅರ್ಥಾನುಸಂಧಾನ ಪೂರ್ವಕ ಪಠಿಸಿದರೆ ಪಾರಾಯಣ ಮಾಡಿದರೆ ಅಧಿಕ ಫಲವೆಂಬುದು ಸುಜನ ಸಮ್ಮತವಾದ ವಿಷಯ !

ಗುರುರಾಜರೆ ! ತಾತ್ಪರ್ಯ ನಿರ್ಣಯ ಭಾವ ಸಂಗ್ರಹಕ್ಕೆ ತಾತ್ಪರ್ಯ ಸಮೇತ ಪ್ರಕಟಿಸುವ ಭಾಗ್ಯವು ನನಗೆ ದೊರೆತಿರುವುದು ಹಿರಿಯರ ಪುಣ್ಯ ವಿಶೇಷವೆಂದು ಭಾವಿಸುತ್ತೇನೆ. ಕೃತಿ ಮುದ್ರಣಕ್ಕೆ ನೆರವಾದ ಆತ್ಮೀಯರಿಗೆ–ಅಂತರಂಗಭಕ್ತರಿಗೆ ಕೃತಜ್ಞತೆಯ ಧನ್ಯವಾದಗಳು ! ಈ ಸತ್ಕೃತಿಯ–ಅನುವಾದ–ಪ್ರಕಾಶನೆಯು ಶ್ರೀಹರಿ ಪ್ರೀತಿಗಾಗಿ ಎಂದಷ್ಟೆ ವಿಬುಧರಲ್ಲಿ ವಿಜ್ಞಾಪನೆ !

27–8–91
ಬೆಂಗಳೂರು

ಬುಧಜನವಿಧೇಯ
ಜೆ. ಎಚ್. ಬಿ. ಆಚಾರ್ಯ

ಸಾಮ್ರಾಟ್ ಪೋಷಕರು

ಆ ತ್ಮೀ ಯ ರು

ಅಂತರಂಗಭಕ್ತರು

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ
ಭಾವಸಂಗ್ರಹ !

ಯೋಽಗ್ರೇ ಭೂದ್ವಿಶ್ವಗರ್ಭಃ ಸುಖನಿಧಿರವಿತೈರ್ವಾಸು
ದೇವಾದಿರೂಪೈಃ

ಕ್ರೀಡನ್ವೀವೈರಜಾದ್ಯೈರಗಣಿತಸುಗುಣೋ
ನಿತ್ಯನೀಚೋಚ್ಚಭಾವೈಃ ।
ವೇದೈರ್ವೇದ್ಯೋಸ್ತದೋಷೋಪ್ಯಸುರಜನಮನೋ
ಮೋಹಯನ್ ಮತ್ಸ್ಯವೃತ್ಯಾ
ಭಕ್ತಾನಾಂ ಮುಕ್ತಿದಾತಾ ದ್ವಿಷದಸುಖಕರಃ ಪಾತು
ಸೋಽಸ್ಮಾನ್ಮಹೇಶಃ ॥೧॥

ಸಕಲ ಚರಾಚರ ಜಗವನ್ನು ತನ್ನ ಉದರದಲ್ಲಿ ಧರಿಸಿದ–ಸುಖನಿಧಿಯಾದ ವಾಸುದೇವಾದಿ ಅನೇಕ ರೂಪಗಳಿಂದ ಬ್ರಹ್ಮಾದಿ ದೇವೇಶರೊಡನೆ ತಾರತಮ್ಯಾನುಸಾರ ಕ್ರೀಡಿಸುವ–ಅನಂತಕಲ್ಯಾಣ ಗುಣಪೂರ್ಣನಾದ ಮೂಲನಾರಾಯಣನು ಸೃಷ್ಟಿಯ ಪೂರ್ವದಲ್ಲಿಯೂ ವಿರಾಜಮಾನನಾಗಿದ್ದನು ವೇದವೇದ್ಯನು–ನಿರ್ದೋಷನು ಆದ ಶ್ರೀಹರಿಯು ಅಸುರ ಜನ ಮೋಹಕನಾಗಿಹನು. ಭಕ್ತರಿಗೆ ಮುಕ್ತಿಪ್ರದನು ವಿದ್ವೇಷಿಗಳಾಡ ದೈತ್ಯರಿಗೆ ದುಃಖಪ್ರದನು ಆಗಿಹನು. ಅಂತಹ ರಮಾಪತಿ ನಮ್ಮನ್ನು ಸದಾ ರಕ್ಷಿಸಲಿ !

ಸದ್ಗ್ರಂಥಾನಾಂ ಸಮೂಹೇ ಜಗತಿ ವಿಲುಲಿತೇ
ಯೇನ ತದ್ಭಾಷ್ಯಮುಚ್ಚೈ-
ರ್ವಕ್ತುಂ ಮುಧ್ವೋ ನಿಯುಕ್ತೋ ವ್ಯಧಿತ
ಸುವಚಸಾಮುದ್ಧೃತಿಂ ಭಾರತಸ್ಯ ।
ವೇದೋತ್ಕೃಷ್ಟಸ್ಯ ವಿಷ್ಣೋಃ ಪರಮಪುರುಷತಾಂ
ತಾರತಮ್ಯಂ ಸುರಾಣಾಮ್

ವಾಯೋರ್ಜೀವೋತ್ತಮತ್ವಾದಿಕಮಪಿ ವದತಾಂ ।
ವ್ಯಾಸಮೀಡೇ ತಮೀಶಮ್ ॥೨॥

ಕಲಿಬಲದಿಂದ ಕಲುಷಿತಚಿತ್ತರಾದ ಜನರು ಶ್ರೀಮನ್ಮಹಾಭಾರತ–ಬ್ರಹ್ಮಸೂತ್ರಗಳು–ಇತರ ಸದ್ಗ್ರಂಥಗಳಿಗೆ ಅಪಾರ್ಥವು ಮಾಡೋಣದರಿಂದ ಸದ್ ಗ್ರಂಥಗಳು ಲೋಪವಾದವು. ಸಮಸ್ತ ಸದ್ಗ್ರಂಥಗಳ ಭಾವವನ್ನು ಜಗತ್ತಿಗೆ ತಿಳಿಸಲೋಸುಗ ಶ್ರೀಹರಿಯ ಆಜ್ಞಾಧಾರಕರಾಗಿ ವಾಯುದೇವರು ಮಧ್ವರಾಗಿ ಅವತಾರ ಮಾಡಿದರು.

ಹರಿಸರ್ವೋತ್ತಮತ್ವ–ವಾಯು ಜೀವೋತ್ತಮತ್ವ–ದೇವತಾ ತಾರ ತಮ್ಯಾದಿ ಸತ್ತತ್ತ್ವಗಳನ್ನು ನಿರೂಪಿಸಲು ಮಹಾ ಭಾರತದ ವಾಕ್ಯಗಳನ್ನು ವೇದವ್ಯಾಸರು ಉದ್ಧಾರ ಮಾಡಿದರು. ಅಂತಹ ವೇದವ್ಯಾಸರ ಗುಣಗಾನ ಮಾಡುತ್ತೇನೆ !

ಆದೌ ರೂಪಚತುಷ್ಟಯೀಂ ಸೃಜತಿ ಯೋ ದೇವಾನ್
ಪುರಾನುಕ್ರಮಾ-
ದ್ಬ್ರಹ್ಮಾಂಡಂ ಪುರವುಬ್ಜಜಾದಿನಿಬುಧಾನ್
ಸೃಷ್ಟ್ವಾ ಹರತ್ಯಂತತಃ ।

ಸೃಷ್ಟ್ವಾ ಪೂರ್ವವದಸ್ಯ ಸರ್ವಜಗತೋ
ಮತ್ಸ್ಯಾದಿರೂಪೈರ್ಭವ-

ದಬ್ಜಾವೋ ಭೂದನುಜಾನ್ವಿತೋ ದಶರಥಾತ್ಪಾಯಾತ್ಸ
ನಃ ಶ್ರೀಪತಿಃ ॥೩॥

ಶ್ರೀಹರಿಯು ಸೃಷ್ಟಿಯ ಆದಿಯಲ್ಲಿ ವಾಸುದೇವಾದಿ ನಾಲ್ಕು ರೂಪಗಳನ್ನು ಪ್ರಕಟಗೊಳಿಸಿದನು. ಆದಿಸೃಷ್ಟಿಯಲ್ಲಿ ಬ್ರಹ್ಮಾದಿ ದೇವತೆಗಳನ್ನು ಸೃಜಿಸುವನು. ಪಾದ್ಮ ಸೃಷ್ಟಿಯಲ್ಲಿ ಬ್ರಹ್ಮಾಂಡವನ್ನು ಮತ್ತೆ ಬ್ರಹ್ಮಾದಿ ದೇವತೆಗಳನ್ನು ಸೃಜಿಸುವನು. ಪ್ರಳಯ ಕಾಲದಲ್ಲಿ ಸಂಹಾರ ಮಾಡುವನು. ಬಳಿಕ ಪೂರ್ವದಂತೆ ಸೃಷ್ಟಿ ಕಾರ್ಯವನ್ನು ಮಾಡುವನು. ಮತ್ಸ್ಯಾದಿ ರೂಪಗಳಿಂದ ಅವತಾರ ಮಾಡುವನು. ಶ್ರೀ ಹರಿಯು ದಶರಥನಲ್ಲಿ ರಾಮ ನಾಗಿ ಅನುಜರಿಂದ ಅವತಾರ ಮಾಡಿದನು. ರಮಾ ರಮಣನಾದ ನಾರಾಯಣನು ನಮಗೆ ರಕ್ಷಕನು.

ಯುದ್ಪೃದ್ಧಿರ್ಜನಮೋಹಿನೀ ಮುದವಿತಾ
ಯುದ್ದರ್ಶನಾತ್ಸಜ್ಜನಾ
ಯೇನರ್ಷಿಪ್ರಿಯಕಾರಿಣಾ ನಿಶಚರೀಹಂತ್ರಾ
ಕ್ರತೂ ರಕ್ಷಿತಃ ।

ಅಹಲ್ಯಾಂ ಸಪತಿಂ ವ್ಯಧದ್ಧರಧನುಂ ಭಂಕ್ತ್ವಾ
ವಹಜ್ಜಾನಕೀಮ್

ಜೇತಾ ವತ್ಮನಿ ಭಾರ್ಗವಸ್ಯ ನಗರೀಂ ರಾಮೋ
ಗತೋವ್ಯಾತ್ಸ ಮಾಮ್ ॥೪॥

ಶ್ರೀರಾಮಚಂದ್ರನು ದಿನ ದಿನ ಪ್ರವರ್ಧಮಾನನಾಗಿ ಬೆಳೆದಂತೆ ಕಾಣ ಬಂದನು; ಇದು ಕೇವಲ ಅಸುರಜನ ಮೋಹನಾರ್ಥವಾಗಿ ಪೂಡಿದ ವಿಡಂಬನೆ; ಶ್ರೀರಾಮಚಂದ್ರನ ದರ್ಶನದಿಂದಲೇ ಸಜ್ಜನರಿಗೆ ಸಂತೋಷವಾಯಿತು. ವಿಶ್ವಾಮಿತ್ರಾದಿ ಮುನಿ ಜನರಿಗೆ ಶ್ರೀರಾಮನು ಪ್ರಿಯವನ್ನುಂಟು ಮಾಡಿದನು. ತಾಟಕಾದಿ ನಿಶಾಚರರ ಸಂಹಾರಗೈದು ಯಜ್ಞಯಾಗಗಳು ನಿರ್ವಿಘ್ನವಾಗಿ ನಡೆಯಲು ಕಾರಣನಾದನು. ಅಹಲ್ಯೆಗೆ ಶಾಪವಿಮೋಚನೆ ಮಾಡಿ ಪತಿಯ ಸಮಾಗಮವನ್ನಿತ್ತನು ಶ್ರೀರಾಮನು.

ಶಿವಧನುಸ್ಸನ್ನು ಮುರಿದು ಜಾನಕಿಯನ್ನು ಕಲ್ಯಾಣವಾದನು. ಮಾರ್ಗದಲ್ಲಿ ಎದುರಾದ ಪರಶುರಾಮರನ್ನು ಜಯಿಸಿದಂತೆ ತೋರಿದನು. ಅಯೋಧ್ಯಾನಗರ ಪ್ರವೇಶಗೈದನು. ಅಯೋಧ್ಯಾರಾಮನು ನನ್ನನ್ನು ರಕ್ಷಿಸಲಿ!

ತ್ಯಕ್ತ್ವಾ ಪಿತೃರಾಜ್ಯಮಿತೋ ವನಂ ವಚನತೋ ಮಾತುಃ
ಸ ಕಾಕಾಪ್ಟಿಗಮ್

ದೈತ್ಯಂ ವ್ಯಸ್ಯವಿಕರ್ಣಘೋಣಖಚರೀಬಂಧೂನ್
ಖರಾದೀನ್ ಖಲಾನ್ |

ಮಾರೀಚಂ ಚ ನಿಹತ್ಯ ರಾವಣಹೃತಾಂ ಸೀತಾಂ
ವಿಚಿನ್ವನ್ನಿವ

ಪ್ರಾಪ್ತೋ ವಾಯುಸುತೇನ ಸೂರ್ಯಜಯೆಜಾ
ರಾಮೋಽವತಾದ್ವಂದಿತಃ ||೫||

ಮಾತೆ ಕೈಕೇಯಿಯ ಮಾತಿನಂತೆ ಶ್ರೀರಾಮಚಂದ್ರನು ಪಿತೃವಾಕ್ಯ ಪರಿಪಾಲಕನಾಗಿ ರಾಜ್ಯವನ್ನು ತೊರೆದು ಅಡವಿಗೆ ನಡೆದನು. ಕಾಗೆಗಳ ಬಲಗಣ್ಣಿನಲ್ಲಿ ವಾಸವಿದ್ದ ಕಾಕಾಸುರನನ್ನು ಕೊಂದನು. ರಾವಣನ ತಂಗಿ ಶೂರ್ಪಣಖಿ ವಿಧವೆ ರಾವಣನನ್ನು ಕಾಮಿಸಿ ಬಂದಳು. ಅವಳ ಕಿವಿ–ಮೂಗು ಗಳನ್ನು ಛಿದ್ರಗೊಳಿಸಿ – ವಿಧವೆಯನ್ನು ವಿಕಾರಗೊಳಿಸಿದನು. ಆಕೆಯ ಬಂಧುಗಳಾದ-ಖರನನ್ನು –ಮಾರೀಚನನ್ನು –ಇತರರನ್ನು ಸಂಹಾರ ಗೈದನು. ರಾವಣನು ಸೀತಾಕೃತಿಯನ್ನು ಕದ್ದು ಒಯ್ದನು ಎಂಬುದನ್ನು ಸರ್ವಜ್ಞ ನಾದ ಶ್ರೀರಾಮಚಂದ್ರನು ಬಲ್ಲನು. ಆದರೂ ಸೀತೆಯನ್ನು ಹುಡುಕು ವವನಂತೆ ವಿಡಂಬನೆ ಮಾಡಿದನು. ಸೂರ್ಯನಂದನ ಸುಗ್ರೀವನಿಂದ ಬಳಿಗೆ ಬಂದ ವಾಯುನಂದನ ಹನುಮಂತನಿಂದ ಅಭಿನಂದಿತನಾದನು. ಶ್ರೀರಾಮ ಚಂದ್ರನು ನಮಗೆ ಸದಾ ರಕ್ಷಕನಾಗಿರಲಿ !

ಸುಗ್ರೀವೇಣ ಸಖಿತ್ವಮಾಪ್ಯ ಶಪಥಂ ಕೃತ್ವಾ ವಧೇ
ವಾಲಿನ-

ಸ್ತಾಲಾನ್ ಸಪ್ತ ವಿಭಿದ್ಯ ವಾಲಿನಿಧನಂ ಕೃತ್ವಾ
ಸ್ವರಾಜ್ಯೇ ಸ್ಥಿತಮ್ ।

ಮಾರ್ತಾಂಡಿಂ ಚ ವಿಧಾಯ ಮಾರುತಿಯುಜಾ
ಯಾಮ್ಯಾಂ ದಿಶಂ ಗಚ್ಛತಾ

ಸೀತಾನ್ವೇಷಣಮಿಚ್ಛತಾಽಬ್ಧಿತರಣೇ
ರಾಮೋಽವತಾತ್ಸಂಸ್ತುತಃ ॥೬॥

ಹನುಮಂತನ ಜೊತೆಯಲ್ಲಿ ಬಂದ ಸುಗ್ರೀವನ ಸಖ್ಯವನ್ನು ಶ್ರೀರಾಮನು ಬೆಳೆಸಿದನು. ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದನು. ತಾಳೆಯ ಮರಗಳ ರೂಪದಲ್ಲಿದ್ದ ಏಳು ಮಂದಿ ರಾಕ್ಷಸರನ್ನು ಶ್ರೀರಾಮನು ಶೀಳಿ ಬಿಸುಟಿದನು. ವಕ್ರಮಾರ್ಗಾನುವರ್ತಿಯಾದ ವಾಲಿಯನ್ನು ವಧಿಸಿದನು. ಸುಗ್ರೀವನನ್ನು ವಾನರ ರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡಿದನು. ಸೀತಾನ್ವೇಷಣೆಗಾಗಿ ಕಪಿಗಳನ್ನು ಎಲ್ಲಾ ದಿಕ್ಕುಗಳಿಗೆ ಕಳಿಸಿದನು. ದಕ್ಷಿಣ ದಿಕ್ಕಿಗೆ ಹೊರಟ ಹನುಮಂತನಿಂದ ಶ್ರೀರಾಮನು ಸಂಸ್ತುತನಾದನು. ಹನುಮತ್ ಸೇವಿತ ಶ್ರೀರಾಮಚಂದ್ರನು ನಮಗೆ ಸದಾ ರಕ್ಷಕನಾಗಿರಲಿ !

ಯಸ್ಯ ಶ್ರೀಹನುಮಾನನುಗ್ರಹಬಲಾತ್ತೀರ್ಣೋ೯ಂ
ಬುಧಿರ್ಲೀಲಯಾ

ಲಂಕಾಂ ಪ್ರಾಪ್ಯ ನಿಶಾಮ್ಯ ರಾಮದಯಿತಾಂ
ಭಂಕ್ತ್ವಾವನಂ ರಾಕ್ಷಸಾನ್ ।

ಅಕ್ಷಾದೀನ್ನಿಹತ್ಯ ವೀಕ್ಷ್ಯ, ದಶಕಂ ದಗ್ಧ್ವಾಪುರೀಂ
ತಾಂ ಪುನ

ಸ್ತೀರ್ಣೋ೯ಬ್ಧಿಃ ಕಪಿಭಿರ್ಯುತೋಽಸ್ಯನಮುತ್ತಂ
ರಾಮಚಂದ್ರಂ ಭಜೇ ॥೭॥

ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀರಾಮಚಂದ್ರನ ಅನುಗ್ರಹ ಬಲದಿಂದ ಹನುಮಂತನು ಸಂಪದ್ಭರಿತನಾದನು. ಸಮುದ್ರವನ್ನು ಲೀಲೆಯಿಂದ ದಾಟಿದನು. ಲಂಕಾನಗರವನ್ನು ಸೇರಿದನು. ರಾಮ ಸತಿ ಸೀತಾ ಮಾತೆಯನ್ನು ಕಂಡನು. ಅಶೋಕವನವನ್ನು ಹಾಳು ಮಾಡಿದನು. ಅಕ್ಷಯ ಕುಮಾರಾದಿ ರಾಕ್ಷಸ ವೀರರನ್ನು ಕೊಂದು ಬಿಸುಟಿದನು. ದಶಾಸ್ಯ ರಾವಣನ ಸಂಗಡ ಮಾತನಾಡಿದನು. ಲಂಕಾಪುರಿಗೆ ಬೆಂಕಿಯನ್ನು ಹಚ್ಚಿ ಪುರವನ್ನು ಸುಟ್ಟು ಬೂದಿ ಮಾಡಿದನು. ಸಮುದ್ರವನ್ನು ದಾಟಿ ಹಿಂದಿರುಗಿ ಬಂದನು. ಕಪಿಗಳಿಂದ ಕೂಡಿ – ಶ್ರೀರಾಮರಲ್ಲಿಗೆ ಬಂದನು. ಹನುಮಂತನು ಶ್ರೀರಾಮಚಂದ್ರನಿಗೆ ಶಿರಸಾ ವಂದಿಸಿದನು. ಸುಪ್ರೀತನಾದ ಶ್ರೀರಾಮಚಂದ್ರನು ನನಗೆ ಸದಾ ರಕ್ಷಕನಾಗಿರಲಿ !

ಸಿಂಧುಂ ದಕ್ಷಿಣಮಾಗತೋ ಪಶಮುಖಭ್ರಾತ್ರಿಷ್ಟ
ದ್ರೋಽಭ್ಯರ್ಚಿತೋ

ಬಧ್ವಾ ಸೇತುಮುವಾಪ್ಯ ರಾಕ್ಷಸಪುರೀಂ ಸೈನ್ಯೈಃ
ಕಪೀನಾಂ ಯುತಃ ।

ಹತ್ವೇಂದ್ರಾರಿಕ ಕುಂಭಕರ್ಣ ದಶಕಾದೀನ್ರಾಕ್ಷಸಾನ್
ಜಾನಕೀ-

ಮಾದಾಯೊಪ್ಯ ಪುರೀಂ ಸ್ವರಾಜ್ಯಪದವೀಂ
ಪ್ರಾಪ್ತೋಽವತಾದ್ರಾಘವಃ ॥೯॥

ಶ್ರೀರಾಮಚಂದ್ರನು ದಕ್ಷಿಣ ಸಮುದ್ರ ತೀರಕ್ಕೆ ಬಂದನು. ರಾವಣನ ತಮ್ಮನಾದ ವಿಭೀಷಣನಿಗೆ ಅಭಯಪ್ರದನಾದನು. ಸಮುದ್ರ ರಾಜನಿಂದ ಪ್ರಾರ್ಥಿತನಾಗಿ ಜಲಧಿಗೆ ಸೇತುವೆಯನ್ನು ಕಟ್ಟಿದನು. ಕಪಿ ಸೈನ್ಯದೊಡನೆ ಲಂಕಾಪುರ ಪ್ರವೇಶ ಗೈದನು. ಇಂದ್ರಜಿತನನ್ನು ಲಕ್ಷ್ಮಣನಿಂದ ಕೊಲ್ಲಿಸಿದನು. ಕುಂಭಕರ್ಣನನ್ನು ಕೋದಂಡರಾಮನು ಕೊಂದು ಓಸುಟಿದನು ದಶಾಸ್ಯ ರಾವಣನನ್ನು ಸಂಹಾರ ಗೈದನು. ಜಾನಕೀ ಸಮೇತ ಶ್ರೀರಾಮ ಚಂದ್ರನು ಅಯೋಧ್ಯೆಗೆ ಮರಳಿ ಬಂದನು. ಆಗ ಶ್ರೀರಾಮ ಪಟ್ಟಾಭಿಷೇಕವಾಯಿತು. ಪಟ್ಟಾಭಿರಾಮನು ನಮಗೆ ಭದ್ರವನ್ನು ಕರುಣಿಸಲಿ !

ಪ್ರಾಪ್ತಃ ಸಾಮ್ರಾಜ್ಯಲಕ್ಷ್ಮೀಂ ಪ್ರಿಯತಮಮುಭರತಂ
ಯೌವರಾಜ್ಯೇಽಭಿಷಿಚ್ಯ
ಸ್ವೀಯಾನ್ ರಕ್ಷನ್ ಸುತೌ ದ್ವೌಜನಕದುಹಿತರಿ
ಪ್ರಾಪ್ಯತಾಂ ತ್ಯಾಜಯನ್ಸ್ವಮ್
ಸೀತಾಹೇತೋರ್ವಿಮೋಹ್ಯ ಕ್ಷಿತಿಜದಿತಿಸುತಾನರ್ಥಿತೋ
ದೇವಸಂಘೈಃ

ಸದ್ಭಿರ್ಯುಕ್ತೋಹನೂಮದ್ವರದ ಉಪಗತಃ ಸ್ವಂ
ಪದಂ ಪಾತು ರಾಮಃ ॥೯॥

ಶ್ರೀರಾಮನು ರಾಜ್ಯಲಕ್ಷ್ಮಿಯನ್ನು ಪಡೆದನು. ಪ್ರಿಯನಾದ ಭರತನನ್ನು ಯುವರಾಜನನ್ನಾಗಿ ಮಾಡಿದನು. ಸ್ವಜನ ರಕ್ಷಕನಾದನು. ಸೀತೆಯಲ್ಲಿ ಕುಶ ಲವರೆಂಬ ಇಬ್ಬರು ಮಕ್ಕಳನ್ನು ಪಡೆದನು. ಅಶ್ವಮೇಧಾದಿ ಯಾಗಗಳನ್ನು ಮಾಡಿದನು. ಅಗ್ನ್ಯಂತರ್ಗತ ಪರಮಾತ್ಮನನ್ನು ಪೂಜಿಸಿದನು. ಸೀತೆಗಾಗಿ ಸುರಾಣಕರೆಂಬ ದೈತ್ಯರನ್ನು ಮೋಹಗೊಳಿಸಿದನು. ಪರಂಧಾಮಕ್ಕೆ ತೆರಳಲು ರುದ್ರಾದಿ ಸುರೇಶರಿಂದ ಪ್ರಾರ್ಥಿತನಾದನು. ಹನುಮಂತ ದೇವರಿಗೆ ಸಹಭೋಗಭಾಗ್ಯವನ್ನಿತ್ತು ಮುಕ್ತಿಯೋಗ್ಯರಿಂದ ಕೂಡಿ ಶ್ರೀರಾಮಚಂದ್ರನು ವೈಕುಂಠಕ್ಕೆ ತೆರಳಿದನು. ಅಂತಹ ಶ್ರೀರಾಮ ಚಂದ್ರನು ನಮಗೆ ರಕ್ಷಕನಾಗಿರಲಿ !

ಶ್ರೀ ಶೋಽಬ್ಧ್ಯನ್ಮಥನಾದಿರಾತ್ಮಚರಿತಂ
ದೇವೈರ್ಗೃಣದ್ಭಿಃ ಸ್ತುತಃ

ಸದ್ಜ್ಞಾನಾಯ ಪರಾಶರಾಖ್ಯಮುನಿನಾ ಯಃ
ಸತ್ಯವತ್ಯಾಮಭೂತ್ ।

ವ್ಯಾಸತ್ವೇನ ವಿಧಾಯ ವೇದವಿವೃತಿಂ ಶಾಸ್ತ್ರಾಣಿ
ಸರ್ವಾಣ್ಯಪಿ

ಜ್ಞಾನಂ ಸತ್ಸು ವಿಧಾಯ ತದ್ಗತಕಲಿಂ ನಿಘ್ನನ್ ಸ
ನೋಽವ್ಯಾದ್ಧರಿಃ ॥೧೦॥

ಕ್ಷೀರಸಮುದ್ರಮಥನಾದಿ ಶ್ರೀಹರಿಯ ಮಹಾಮಹಿಮೆಗಳನ್ನು ದೇವತೆಗಳು ಕೊಂಡಾಡಿದರು. ಸುಜನರಿಗೆ ಸುಜ್ಞಾನವನ್ನು ನೀಡುವ ಸಲುವಾಗಿ ಪರಮಾತ್ಮನು ಪರಾಶರ ಮುನಿಗಳಿಂದ ಸತ್ಯವತೀ ದೇವಿಯಲ್ಲಿ–ವ್ಯಾಸ ಭಗವಾನರಾಗಿ ಅವತಾರ ಮಾಡಿದನು. ವೇದವಿಭಾಗ ಮಾಡಿ ಶಾಸ್ತ್ರಗಳನ್ನು ರಚಿಸಿ–ದುರ್ಜನರಲ್ಲಿ ಮಿಥ್ಯಾಜ್ಞಾನ ರೂಪದಿಂದ ಅವರಿಸಿದ್ದ ಕಲಿಯನ್ನು ನಿಗ್ರಹ ಮಾಡಿದನು. ಸುಜನರಿಗೆ ಸುಜ್ಞಾನದಾತನಾದನು. ವ್ಯಾಸರೂಪೀ ಭಗವಾನ್ ಶ್ರೀಹರಿಯೇ ನಮಗೆ ರಕ್ಷಕನು.

ಭೂಪಾ ಯತ್ರ ಪುರೂರವಪ್ರಭೃತಯೋ ಜಾತಾ
ವಿಧೋರಸ್ಯಯೋ
ಯದ್ವಾದ್ಯಾ ಭರತಾದಯಃ ಕುರುಮುಖಾ
ಭೀಷ್ಮಾಂಬಿಕೇಯಾದಯಃ ।
ಭೂಭಾರಕ್ಷಯಕಾಂಕ್ಷಿಭಿಃ ಸುರವರೈರಭ್ಯರ್ಥಿತಃ
ಶ್ರೀಪತಿ

ಸ್ತತ್ರಾವಿರ್ಭವಿತುಂ ಸಹ ಸುರವರೈರಿಚ್ಛನ್ ಹರಿಃ
ಪಾತು ವಾಮ್ ॥೧೧॥

ಪುರೂರವಾದಿರಾಜರು ಚಂದ್ರವಂಶದಲ್ಲಿ ಜನಿಸಿದರು. ಯದು-ಭರತ-ಕುರು-ಭೀಷ್ಮ-ಧೃತರಾಷ್ಟ್ರಾದಿರಾಜರು ಪುಟ್ಟಿದ ಚಂದ್ರವಂಶದಲ್ಲಿ ಶ್ರೀಹರಿ ಅವತಾರ ಮಾಡಿದನು. ಭೂಭಾರಹರಣಾರ್ಥವಾಗಿ ಸುರವರರಿಂದ ಪ್ರಾರ್ಥಿತನಾಗಿ ದೇವತೆಗಳಿಂದ ಕೂಡಿ ಶ್ರೀಹರಿ ಚಂದ್ರವಂಶದಲ್ಲಿ ಶ್ರೀ ಕೃಷ್ಣನಾಗಿ ಅವತಾರ ಮಾಡಿದನು. ಕೃಷ್ಣರೂಪಿ ಶ್ರೀಹರಿಯೇ ನಮಗೆ ರಕ್ಷಕನು.

ದೇವಕ್ಯಾಂ ವಸುದೇವತೋಽಗ್ರಜಯುತೋ ಜಾತೋ
ವ್ರಜಂ ಯೋ ಗತೋ

ಬಾಲಘ್ನೀ ಶಕಟಾಕ್ಷಹಾ ಸ್ವಜನನೀಮಾನ್ಯಸ್ತೃಣಾ-
ವರ್ತಹಾ ।

ಯುತ್ಪೂರ್ವಂ ಭರತಶ್ಚ ಪಾಂಡುತನಯಾ
ಯುತ್ಸೇವನಂ ಜಜ್ಞಿರೇ

ಕರ್ತುಂ ಧರ್ಮಮುರುದ್ವೃಷ್ಣಾಶ್ವಿಭಿರಜಂ
ನಂದಾತ್ಮಜಂ ನೌಮಿ ತಮ್ ॥೧೭॥

ಶ್ರೀಹರಿ ಬಲರಾಮನನ್ನು ಅಣ್ಣನಾಗಿ ಪಡೆದಿಕೊಂಡು ದೇವಕೀ ವಸು ದೇವರ ಮಗನಾಗಿ ಅವತಾರ ಮಾಡಿದನು. ಗೋಕುಲಕ್ಕೆ ತೆರಳಿದನು. ಮಕ್ಕಳನ್ನು ಕೊಲ್ಲುತ್ತಿದ್ದ ಪೂತನಿಯನ್ನು ಮತ್ತು ಶಕಟಾಸುರನನ್ನು ಲೀಲೆಯಿಂದ ಕೊಂದನು. ತೃಣಾವರ್ತನನ್ನು ಮುಗಿಸಿದನು. ತಾಯಿಯಾದ ಯಶೋದಾದೇವಿಗೆ ಬಾಯಿಯಲ್ಲಿ ವಿಶ್ವರೂಪವನ್ನು ತೋರಿದನು. ಶ್ರೀಹರಿಯ ಸೇವೆ ಮಾಡಲು ದೇವತೆಗಳಲ್ಲಿ ಯಮಧರ್ಮನು ಮುಖ್ಯ ಪ್ರಾಣನು ದೇವೇಂದ್ರನು ಅಶ್ವಿನೀ ದೇವತೆಗಳು ಶ್ರೀಕೃಷ್ಣಾವತಾರಕ್ಕೆ ಪೂರ್ವದಲ್ಲಿ ಕೆಲವರು ಅನಂತರದಲ್ಲಿ ಕೆಲವರು ಪಾಂಡುಪುತ್ರರಾಗಿ ಅವತಾರ ಮಾಡಿದರು. ನಂದಕಿಶೋರ ನವನೀತಚೋರನಾದ ಬಾಲಕೃಷ್ಣನು ನಮಗೆ ರಕ್ಷಕನಾಗಿರಲಿ ಎಂಬುದಾಗಿ ಪ್ರಾರ್ಥಿಸಿ ಸ್ತುತಿಸುವೆನು.

ಸಂಸ್ಕಾರಾನ್ ಪ್ರಾಪ್ಯ ಗರ್ಗಾದ್ಯಹುತಿಶುಚರಿತ್ರೈಃ
ಪ್ರೀಣಯನ್ ಗೋಪಗೋಪೀ-
ವರ್ತ್ಮಾನ್ ಧೇನೂಂಶ್ಚ ರಕ್ಷನ್ನಹಿಪತಿದಮನೋ ಯಃ
ಪಪೌ ಕಾನನಾಗ್ನಿಮ್ ।
ವಿಪ್ರಸ್ತ್ರೀಪ್ರೀತಿಕಾರೀ ಧೃತಧರಣಿಧರೋ-
ಗೋಪಿಕಾಭಿರ್ನಿಶಾಸು

ಕ್ರೀಡನ್ಮಲ್ಲಾಂಶ್ಚ ಕಂಸಂ ನ್ಯಹನದುಪಗತೋಽವ್ಯಾತ್ಸ
ಕೃಷ್ಣಃ ಪುರೀಂ ಸ್ವಾಂ ॥೧೩॥

ಶ್ರೀ ಕೃಷ್ಣನು ಗರ್ಗಾಚಾರ್ಯರಿಂದ ಕ್ಷತ್ರಿಯೋಚಿತ ನಾಮಕರಣಾದಿ ಸಂಸ್ಕಾರಗಳನ್ನು ಪಡೆದನು. ಬಾಲಲೀಲೆಗಳಿಂದ ಗೋಪೀ ಜನರನ್ನು–ಗೋಪಾಲಕರನ್ನು ಆನಂದಪಡಿಸಿದನು. ಗೋಗಳನ್ನು–ಕರುಗಳನ್ನು ಕಾಯಲು ಹೊರಟನು. ಕಾಳಿಯ ಮರ್ದನ ಮಾಡಿದನು. ಕಾನನ ಅಗ್ನಿಯನ್ನು ಪಾನ ಮಾಡಿದನು. ವಿಪ್ರ ಪತ್ನಿಯರಿಂದ ಅನ್ನವನ್ನು ಸ್ವೀಕರಿಸಿ ಅವರನ್ನು ಅನುಗ್ರಹಿಸಿದನು ; ಗೋವರ್ಧನ ಗಿರಿಯನ್ನು ಎತ್ತಿಹಿಡಿದನು. ಗೋಪಿಕಾ ಸ್ತ್ರೀಯರ ಜೊತೆಯಲ್ಲಿ ರಾತ್ರಿ ಬೆಳದಿಂಗಳಲ್ಲಿ ರಾಸಕ್ರೀಡ ಆಡಿದನು. ಮಾವ ಕಂಸನಿಂದ ಮಥುರೆಗೆ ಆಹ್ವಾನಿತನಾದನು. ಚಾಣೂರ ಮುಷ್ಟಿಕರನ್ನು ಸಂಹಾರ ಮಾಡಿದನು. ಕಂಸನನ್ನು ಕಾಲನ ಬಳಿಗೆ ಕಳುಹಿದ ಕೃಷ್ಣನು ನಮಗೆ ರಕ್ಷಕನಾಗಿರಲಿ !

ಪಿತ್ರೋರ್ಬಂಧಂ ನಿರಸ್ಯ ಕ್ಷಿತಿಪತಿವುಕರೋದುಗ್ರಸೇನಂ
ಗುರೋರ್ಯುಃ

ಪುತ್ರಂ ಪ್ರಾದಾತ್ಪರೇತಂ ಯುಧಿಜಿತಜರಾಸಂಧ-
ಪೂರ್ವಾರಿವರ್ಗಃ ।

ಪಾಥೋರ್ನ್ಯಿತ್ರಾವಿಹೀನಾನುಪಗತನಗರಾನ್ ಯಸ್ತ್ರಿ
ಜ್ಞೋಪಾದ್ವಿಷದ್ಘ್ನೋ

ನಂದಾದೀನುದ್ಧವೋಕ್ತ್ಯಾ ಗತವಿರಹಶುಚಃ
ಕಾರಯನ್ಸೋವತಾನ್ನಾವಮ್ ॥೧೪॥

ಶ್ರೀ ಕೃಷ್ಣನು ಬಂಧನದಲ್ಲಿದ್ದ ಮಾತಾಪಿತೃಗಳಿಗಿಸಿದ ದೇವಕೀ ವಸು ದೇವರನ್ನು ಬಂಧವುಕ್ತರನ್ನಾಗಿ ಮಾಡಿದನು. ಉಗ್ರಸೇನನನ್ನು ರಾಜನನ್ನಾಗಿ ಮಾಡಿದನು. ಗುರುಗಳಿಂದ ಸಾಂದೀಪನ್ಯಾಚಾರ್ಯರ ಮೃತ ಪುತ್ರನನ್ನು ಬದುಕಿಸಿ ಗುರುದಕ್ಷಿಣೆಯಾಗಿ ತಂದುಕೊಟ್ಟನು. ಜರಾಸಂಧಾದಿ ವೈರಿ ವರ್ಗವನ್ನು ಜಯಿಸಿದನು. ತಂದೆಯ ಮರಣಾನಂತರ ಅನೇಕ ಆಪತ್ತುಗಳಿಗೆ ಗುರಿಯಾದ ಪಾಂಡವರನ್ನು ಕಾಪಾಡಿದನು. ಉದ್ಧವನನ್ನು ಗೋಕುಲಕ್ಕೆ ಕಳುಹಿಸಿ ನಂದಾದಿಗಳನ್ನು ಗೋಪೀ ಜನರನ್ನು ಸಮಾಧಾನಪಡಿಸಿದನು. ಅಜನಾದ ಅವತಾರ ಪುರುಷನಾದ ಶ್ರೀಕೃಷ್ಣ ಪರಮಾತ್ಮನು ನನ್ನನ್ನು ಸದಾ ಸಂರಕ್ಷಿಸಲಿ !

ಯಸ್ಮಾದ್ವ್ಯಾಸಸ್ವರೂಪಾದಪಿ ವಿದಿತಸುವಿದ್ಯಾ-
ಮವಾಪುಃ ಪ್ರಮೋದಮ್

ಪಾರ್ಥಾನ್ದ್ರೋಣಃಸುತಾರ್ಥಂ ಪ್ರತಿಗತಭೃಗುಜ್ಞೋ
ಯನ್ನಿಯತ್ಯಾರ್ಥಕಾಮಃ ।

ತಸ್ಮಾದಾಪ್ತೋರುವಿದ್ಯಾ ದೃಪದಮುಪಗತೋ
ಸಾಪ್ತಕಾಮೋಸ್ತ್ರವಿದ್ಯಾ

ಶಿಷ್ಯೇಭ್ಯಃ ಕೌರವೇಭ್ಯೋ ರವಿಜನಿರಸನೋ ವ್ಯಾತ್ಸ
ನೋ ವಾಜ್ಮಾರಿಃ ॥೧೫॥

ಪರಮಾತ್ಮನ ಮತ್ತೊಂದು ರೂಪವೇ ಆದ ವೇದವ್ಯಾಸರಿಂದ ಸಕಲ ವಿದ್ಯೆಗಳನ್ನು ಕಲಿತ ಪಾಂಡವರು ಸಂತೋಷದಿಂದಿದ್ದರು. ಶ್ರೀಹರಿಯ ಸಂಕಲ್ಪದಂತೆ ದ್ರೋಣಾಚಾರ್ಯರು ಮಗ ಅಶ್ವತ್ಥಾಮನಿಗೆ ಸಂಪತ್ ಪ್ರಾಪ್ತಿಗಾಗಿ ಭಾರ್ಗವ ರಾಮರಲ್ಲಿಗೆ ಹೋಗಿ ಅವರಲ್ಲಿ ಶ್ರೇಷ್ಠ ವಿದ್ಯೆಗಳನ್ನು ಪಡೆದನು. ದ್ರುಪದ ರಾಜನಲ್ಲಿಗೆ ಹೋಗಿ ವಿಫಲ ಮನೋರಥರಾದರು. ಕೌರವರಲ್ಲಿಗೆ ಬಂದರು. ಕುರುಪಾಂಡವರಿಗೆ ಅಸ್ತ್ರವಿದ್ಯಾಭ್ಯಾಸ ಮಾಡಿಸಿದರು. ಸೂತಪುತ್ರನಾದ ಕರ್ಣನನ್ನು - ಶಿಷ್ಯನನ್ನಾಗಿ ಸ್ವೀಕರಿಸದೇ ತಿರಸ್ಕರಿಸಿದರು. ಶ್ರೀಹರಿಯ ರೂಪನಾದ ಯಾದವಕೃಷ್ಣನು ನಮಗೆ ಸದಾ ರಕ್ಷಕನಾಗಿರಲಿ!

ಭೂಯಸ್ತ್ವಾಗತಮಾಹವೇ ಸಹಜರಾಸಂಧೈನ್ಯ-
ಪೈನಿರ್ಜಿತಯೇ

ಜ್ಞಾತ್ವಾಗಾತ್ಸಹಜಾನ್ವಿತೋಽತಿಗಹನಂ
ಗೋಮಂತಮತ್ರಾಗಮತ್ ।

ತಾಕ್ಷ್ಯಾರ್ಲ್ಲಬ್ಧಕಿರೀಟ ಉನ್ನತಗಿರೇರಾಪ್ಲುತ್ಯ ಜಿತ್ವಾಽರಿಪ್ರೂನ್

ಹತ್ವಾಽಸ್ವೀಯಸೃಗಾಲಆತ್ಮನಗರೀಂ ಪ್ರಾಪ್ತಃ ಸ
ನೋಽವ್ಯಾದ್ಧರಿಃ ॥೧೬॥

ಅನೇಕ ರಾಜರಿಂದ ಕೂಡಿ ಜರಾಸಂಧನು ಮತ್ತೆ ಕೃಷ್ಣನ ಮೇಲೆ ಯುದ್ಧಕ್ಕೆ ಬಂದನು. ಆಗ ಕೃಷ್ಣನು ಬಲರಾಮನಿಂದ ಕೂಡಿ ದುರ್ಗಮವಾದ ಗೋಮಂತ ಪರ್ವತಕ್ಕೆ ಬಂದನು. ಬಲಿಚಕ್ರವರ್ತಿ ಕೊಂಡೊಯ್ದ ತನ್ನ ಕಿರೀಟವನ್ನು ಕೃಷ್ಣನು ಗರುಡನಿಂದ ತರಿಸಿ ಪಡೆದನು. ಪರ್ವತಾಗ್ರದಿಂದ ಧುಮುಕಿ ಜರಾಸಂಧನನ್ನು ಜಯಿಸಿದನು. ಬಂಧುವಾದ ಸೃಗಾಲವಾಸುದೇವನನ್ನು ಕೊಂದು ಮಥುರೆಗೆ ಹಿಂದಿರುಗಿದ ಶ್ರೀಕೃಷ್ಣನು ನಮಗೆ ಸದಾ ರಕ್ಷಕನಾಗಿರಲಿ !

ಭಗ್ನಾಶಾನ್ನೃಪತೀನರೀನ್ವ್ಯಧಿತಯನ್
ಸ್ವರ್ಗಾಧಿಪಾದ್ಯಾಸನೇ

ಲಗ್ನೋ ಭೀಷ್ಮಕಸತ್ಕೃಥೋತ ಪರಮಂ
ಜಘ್ನೇಸತೀಮಾತ್ಮನಃ ।

ಜಿಘ್ರಾಂ ಯೋ ಕೃತ ರುಕ್ಮಿಣೀಂ
ಸಮಜಯದ್ದುರ್ಗಂ ವಿರುಗ್ಮ್ಯಾದಿಕಾನ್

ಜಿಘ್ರನ್ ಸತ್ರಾಜಿತಾತ್ಮಜಾಪತಿರಸೌ ಮೇಘ್ನನ್
ಭವೇತ್ಸರ್ವದಾ ॥೧೭॥

ರುಕ್ಮಿಣಿಯು ಶಿಶುಪಾಲನೆಂಬ ಜರಾಸಂಧಾದಿ ಶತ್ರುರಾಜರ ದುರಾಶೆಯನ್ನು ಶ್ರೀಹರಿ ಭಗ್ನಗೊಳಿಸಿದನು. ದೇವೇಂದ್ರನು ಕಳಿಸಿದ ರತ್ನ ಸಿಂಹಾಸನದಲ್ಲಿ ಶ್ರೀಕೃಷ್ಣನು ಆಸೀನನಾದನು. ಭೀಷ್ಮಕ ರಾಜನಿಂದ ಸತ್ಕಾರ ಪಡೆದನು. ಬಳಿಕ ಕಾಲಯವನನ್ನು ಕಾಲನ ಬಳಿಗೆ ಕಳುಹಿದನು. ತನ್ನಲ್ಲಿ ರತಳಾದ ತನ್ನವಳಾದ ರುಕ್ಮಿಣಿಯನ್ನು ವಿವಾಹವಾದನು. ಅಡ್ಡಿಮಾಡಿ ಯುದ್ಧಕ್ಕೆ ಬಂದ ರುಕ್ಮಿ ಮೊದಲಾದ ದುರ್ಮದರನ್ನು ಯುದ್ಧದಲ್ಲಿ ಜಯಿಸಿದನು. ಸತ್ರಜಿದ್ರಾಜನ ಪ್ರೀತಿಯ ಮಗಳಾದ ಸತ್ಯಭಾಮೆಯ ಪತಿಯಾದ ಶ್ರೀಕೃಷ್ಣನು ನಮಗೆ ಜೀವನದಲ್ಲಿ ಬರುವ ಸಕಲ ವಿಘ್ನಗಳನ್ನು ನಿವಾರಿಸಿ ನಮ್ಮನ್ನು ರಕ್ಷಿಸಲಿ!

ಅಸ್ಮಜ್ಜೀಷ್ಟಧಿಕೋಽರ್ಜುನೋಽಥ ಯುದನುಕ್ರೋಶೇನ
ಭೀಮಂ ವಿನಾ

ಸದ್ಧರ್ಮೇ ನಿರತಂ ದದೌ ಸ್ವಗುರವೇ ಬಧ್ವಾನೃಪಂ
ಪಾರ್ಷತಮ್ ।

ಪುತ್ರೌ ಸ ದ್ರುಪದೋಽಪಿ ವಹ್ನಿವಿಬುಧಾತ್
ಸ್ತ್ರೀರೂಪಕಂ ಪ್ರಾಪ್ತವಾನ್

ಇಷ್ಟ್ವಾಧ್ವರ್ಜ ಆಪ ರಾಜ್ಯಪದವೀಂ ಸ
ಪ್ರೀಯತಾಂ ನೋ ಹರಿಃ ॥೧೪॥

ಶುದ್ಧ ಭಾಗವತ ಧರ್ಮದಲ್ಲಿರತರಾದ ಭೀಮಸೇನ ದೇವರನ್ನು ಬಿಟ್ಟು ಉಳಿದ ಪಾಂಡವರಲ್ಲಿ ಶ್ರೇಷ್ಠನಾದ ಅರ್ಜುನನು ದ್ರುಪದರಾಜನನ್ನು ಬಂಧಿಸಿ ತಂದು ದ್ರೋಣಾಚಾರ್ಯರಿಗೆ ಗುರು ಕಾಣಿಕೆಯಾಗಿ ಸಮರ್ಪಿಸಿದನು. ಆ ದ್ರುಪದರಾಜನು–ಅಂತಹ ದ್ರೋಣರನ್ನು ಕೊಲ್ಲುವ ಮಗನನ್ನು–ಅರ್ಜುನನನ್ನು ವರಿಸುವ ಮಗಳನ್ನು ಅಗ್ನಿದೇವನಿಂದ ಪಡೆದನು. ಧರ್ಮರಾಯನು ವಾರಣಾವತ ರಾಜ್ಯಾಧಿಪತ್ಯವನ್ನು ಶ್ರೀಹರಿಯ ದಯದಿಂದ ಪಡೆದನು. ಪಾಂಡವ ಬಂಧುವಾದ ಶ್ರೀಹರಿ ನನ್ನಲ್ಲಿ ಪ್ರೀತನಾಗಲಿ–ಕೃಪೆ ಮಾಡಲಿ !

ಯತ್ಕಾರುಣ್ಯಬಲೇನ ಪಾಂಡುತನಯಾ ನಿಸ್ತೀರ್ಯ ನಾನಾಪದೋ

ಭಿಕ್ಷಾನ್ನಾಶಿನ ಆಗತಾಭ್ಯಸನಿನೋ ಹತ್ವಾ ಬಕಂ ದ್ರೌಪದೀಮ್ ।

ಉದ್ವಾಹ್ಯಾಖಿಲಭೂಪತೀನಪಿ ತತೋ ಜಿತ್ವಾ ಗತಾನ್ ಸ್ವಾಂ ಪುರೀ-

ಮಿಂದ್ರಪ್ರಸ್ಥಪುರೇ ವಸನ್ ಕೃತಧರಾರಕ್ಷಾನ್ ಸ ನೋऽವ್ಯಾದ್ಧರಿಃ ॥೧೯॥

ಶ್ರೀ ಹರಿಯ ದಯದಿಂದ ಪಾಂಡವರು ಅರಗಿನ ಮನೆಯಲ್ಲಿ ಸಾಯದೇ ಉಳಿದರು ಎಲ್ಲಾ ವಿಪತ್ತುಗಳಿಂದ ಪಾರಾದರು. ಏಕಚಕ್ರನಗರದಲ್ಲಿ ವೇದಾಧ್ಯಯನ ಮಾಡಿದರು. ಭಿಕ್ಷಾಟನೆಯಲ್ಲಿ ಕಾಲ ಕಳೆದರು. ದ್ರೌಪದೀ ದೇವಿಯನ್ನು ಲಗ್ನವಾದರು. ಬಲಿಷ್ಠನಾದ ಬಕಾಸುರನನ್ನು ಕೊಂದರು. ಇತರ ರಾಜರನ್ನು ಯುದ್ಧದಲ್ಲಿ ಜಯಿಸಿದರು. ಹಸ್ತಿನಾವತಿಗೆ ಹಿಂದಿರುಗಿದರು. ಪಾಂಡವರು ಇಂದ್ರಪ್ರಸ್ಥದಲ್ಲಿದ್ದು ಶ್ರೀಹರಿ ಕರುಣೆಯಿಂದ ರಾಜ್ಯವಾಳಿದರು. ಪಾಂಡವ ಬಂಧುವಾದ ಶ್ರೀಹರಿ ನಮ್ಮನ್ನು ಸದಾ ಕಾಪಾಡಲಿ !

ಯಃ ಪಾರ್ಥಾನ್ಪರಿಪಾಲಯನ್ ಹರಿಪುರೇ
ಸ್ತ್ರೀಪುತ್ರಸಂಪದ್ಯುತಾನ್
ಸಂಪತ್ತಾ ಶತಧನ್ವಮುಷ್ಟಮುಹಿಷ್ಠೀಭತಾ
ಸುರರ್ಷಿಸ್ತುತಃ
ಹತ್ವಾ ಭೌಮಮುಪಾಹರತ್ಸುರತರುಂ
ಬಹ್ವೀರುವಾಹಾಂಗನಾಃ

ಪ್ರಾಯುಚ್ಚದ್ಧರಿಸೂನವೇ ಸ್ವಸಹಜಾಂ ಪಾಯಾತ್ಸ
ನಃ ಕೇಶವಃ ॥೨೦॥

ಶ್ರೀಹರಿ ಹಸ್ತಿನಾವತಿಯಲ್ಲಿ–ಸತೀಸುತರಿಂದ ಕೂಡಿದ ಸವ್ಯಸಾಚಿಯನ್ನು ಸಂರಕ್ಷಿಸುತ್ತಾ ಇದ್ದನು. ಶತಧನ್ವನನ್ನು ಸಂಹಾರಗೈದನು. ಅಷ್ಟ ಮಹಷಿಯರಿಂದ ಕೂಡಿ ಆನಂದದಿಂದಿದ್ದನು. ದೇವರ್ಷಿಗಳಾದ ನಾರದರು ಶ್ರೀಹರಿಯ ವಿಚಿತ್ರ ಮಹಿಮೆಯನ್ನು ಕಣ್ಣಾರೆ ಕಂಡನು. ಶ್ರೀಹರಿ ಆಶ್ಚರ್ಯತಮನೇದು ಕೊಂಡಾಡಿದರು. ಶ್ರೀಹರಿಯು ನರಕನನ್ನು ನರಕಕ್ಕೆ ಕಳುಹಿದನು. ಸ್ವರ್ಗಲೋಕದಿಂದ ಪಾರಿಜಾತವೃಕ್ಷವನ್ನು ತಂದನು. ಹದಿನಾರು ಸಾವಿರದ ಒಂದು ನೂರು ಕನ್ನಿಯರನ್ನು ಶ್ರೀಹರಿ ವಿವಾಹವಾದನು. ಅರ್ಜುನನಿಗೆ ತನ್ನ ತಂಗಿಯಾದ ಸುಭದ್ರೆಯನ್ನಿತ್ತು ವಿವಾಹಮಾಡಿದನು. ಪಾಂಡವ ಪ್ರಿಯನಾದ ಶ್ರೀಹರಿ ನಮ್ಮನ್ನು ಸದಾ ಕಾಪಾಡಲಿ !

ಪಾರ್ಥಾನ್ ಲಬ್ಧಸಭಾಂ ವಿಧಾಯ ಮಯತೋ
ಚಾತಃ ಪುರಂ ಸ್ವಂ ಗತಃ
ಕ್ಷೀಪ್ರಂ ಕೌರವಮರ್ದ ಪರ್ವಣಿಪುರೀಂ ಸಂಪ್ರಾಪ್ಯ
ಕರ್ತಾಕೃತೋಃ ।

ಪಾಂಡೂನ್ ಪ್ರಾಪ್ಯ ಜರಾಸುತೇ ವಿನಿಹತೇ ತೈಃ
ಕಾರಯಿತ್ವಾಧ್ವರಮ್

ಪ್ರಾಪ್ತಃ ಸ್ವಂ ಪುರಮುಚ್ಯತೋ ವಿಜಯತೇ
ದ್ಯೂತೇ ಜಿತೈಶ್ಚ ಸ್ಮೃತಃ ॥೨೧॥

ಶ್ರೀಕೃಷ್ಣನು ಪಾಂಡವರಿಗೆ ಅಮರಶಿಲ್ಪಿಯಿಂದ ಮಯ ಸಭೆಯನ್ನು ನಿರ್ಮಾಣ ಮಾಡಿಸಿದನು. ಬಳಿಕ ದ್ವಾರಕಾ ನಗರಕ್ಕೆ ತೆರಳಿದನು. ಅಶ್ವಮೇಧಯಾಗವನ್ನು ಮಾಡಿದನು. ಮತ್ತೆ ಪಾಂಡವರಲ್ಲಿಗೆ ಬಂದನು ! ಭೀಮಾರ್ಜುನರೊಂದಿಗೆ ಜರಾಸಂಧನಲ್ಲಿಗೆ ಶ್ರೀಹರಿ ನಡೆದನು. ಜರಾಸಂಧನನ್ನು – ಭೀಮನಿಂದ ಕೊಲ್ಲಿಸಿದನು. ಆಗ ಪಾಂಡವರಿಂದ ರಾಜಸೂಯ ಮಹಾಯಾಗವನ್ನು ಮಾಡಿಸಿದನು. ಶ್ರೀಹರಿ ಬಳಿಕ ದ್ವಾರಕಾಪುರಿಗೆ ನಡೆದನು. ಅದೇ ಸಂದರ್ಭದಲ್ಲಿ ಪಾಂಡವರು ಮಾಯಾದ್ಯೂತದಲ್ಲಿ ಕೌರವರಿಗೆ ಪರಾಜಿತರಾದರು. ಪರಾಜಿತರಾದ ಪಾಂಡವರು ಸಂಕಟದಲ್ಲಿ ಶ್ರೀಹರಿಯನ್ನು ಸ್ಮರಿಸಿದರು. ಆಪದ್ಬಂಧುವಾದ ಆ ಹರಿಯೇ ನಮಗೆ ರಕ್ಷಕನು.

ಪಾರ್ಥಾ ಯಾತಾ ಅರಣ್ಯಂ ನಿಹತನಿಶಿಚರಾಃ
ಪ್ರೀಣಯಂತೋ ದ್ವಿಜೌಘಾನ್

ವಾರ್ತಾಂ ಶ್ರುತ್ವಾ ಸ್ವಕೀಯಾಮುಪಗತಹರಿಣಾ
ಮಾನಿನಾ ಸಿಂಧುರಾಜಮ್ ।

ಜಿತ್ವಾ ದುರ್ಯೋಧನಾದೀನ್ ಹರಿಹಯಪುರುಷ-
ವ್ರಾತಬದ್ಧಾನ್ವಿಮೋಚ್ಯ

ಪ್ರಾಪ್ತಾ ಧರ್ಮಾತ್ಪ್ರಸಾದಂ ಯಮಥಮಧುರಿಪುಂ
ತುಷ್ಟುವುಸ್ತಂ ಪ್ರಪದ್ಯೇ ॥೨೨॥

ದ್ಯೂತದಲ್ಲಿ ಸೋತ ಪಾಂಡವರು ವನವಾಸಕ್ಕೆ ತೆರಳಿದರು. ಅಲ್ಲಿ ಕಿರ್ಮಾರಾದಿ ರಾಕ್ಷಸರನ್ನು ಕೊಂದರು. ಬ್ರಾಹ್ಮಣರನ್ನು ಸದಾ ಸಂತೋಷ ಪಡಿಸಿದರು. ಪರಾಜಿತರಾದ ಪಾಂಡವರ ವಿಷಯ ಕೇಳಿ ಶ್ರೀಹರಿ ಅವರಲ್ಲಿಗೆ ಬಂದನು. ಕಷ್ಟದಲ್ಲಿದ್ದ ಪಾಂಡವರನ್ನು ಹಿತವಚನಗಳಿಂದ ಸಮಾಧಾನ ಪಡಿಸಿದನು. ಪಾಂಡವರು ಜಯದ್ರಥನನ್ನು ಜಯಿಸಿದರು. ದೇವೇಂದ್ರನ ಆಜ್ಞೆಯಿಂದ ಚಿತ್ರಸೇನನೆಂಬ ಗಂಧರ್ವನು ದುರ್ಯೋಧನಾದಿ ದುಷ್ಟರನ್ನು ಬಂಧಿಸಿದನು. ಅವರನ್ನು ಪಾಂಡದರು ಬಂಧವಿಮುಕ್ತರನ್ನಾಗಿ ಮಾಡಿದರು. ಯಕ್ಷಪ್ರಶ್ನೆಗಳಿಗೆ ಧರ್ಮರಾಯನು ಸೂಕ್ತ ಸಮಾಧಾನಗಳನ್ನಿತ್ತು ಯಕ್ಷನನ್ನು ಸಂತೋಷಪಡಿಸಿದನು ; ಶ್ರೀಹರಿ ಪ್ರೀತಿಪಾತ್ರರಾದ ಪಾಂಡವರು ಹರಿಸ್ಮರಣೆ ಗೈದರು. ಪಾಂಡವ ಬಂಧುವಾದ ಶ್ರೀಹರಿ ನಮಗೆ ಸದಾ ರಕ್ಷಕನಾಗಿರಲಿ !

ಅನ್ಯಂ ವೇಷಮುಪಾಗತಾ ಪೃಥಗತೋ ಗತ್ವಾ
ವಿರಾಟಾಲಯಮ್

ತದ್ವೀಹೇ ಹರಿನಿಷೇವಣಪರಾ ಮುಲ್ಲಂ ತಥಾ
ಕೀಚಕಾನ್ ।

ಹತ್ವಾ ಗೋಗ್ರಹಣೋದ್ಯತಾನಪಿ ಕುರೂನ್ಜಿತ್ವಾ
ವಿರಾಟಾರ್ಚಿತಾಃ

ಪಾರ್ಥಾಃ ಸ್ವಾಂತಿಕಮಾಗತಂ ಯಮಜಿತಂ
ಭೇಜುಸ್ತಮೀಡೇ ಚ್ಯುತಮ್ ॥೨೩॥

ಪಾಂಡವರು ವನವಾಸವನ್ನು ಮುಗಿಸಿದರು. ಅಜ್ಞಾತವಾಸ ಕಾಲ ಬರಲು ಅವರು ಮಾರುವೇಷಗಳಿಂದ ವಿರಾಟ್ರಾಯನ ಬಳಿಗೆ ಬಂದರು. ರಾಜಾಂ ತರ್ಯಾಮಿಯಾದ ಶ್ರೀಹರಿ ಸೇವೆ ಎಂಬ ಬುದ್ಧಿ ಇಂದ ವಿರಾಟ್ರಾಯನ ಸೇವೆ ಗೈದರು. ಮಹಾಮುಲ್ಲನನ್ನು – ಕೀಚಕನನ್ನು – ಉಪಕೀಚಕರನ್ನು ಭೀಮ ಸೇನನು ಕೊಂದು ಬಿಸುಟಿದನು. ಗೋಗ್ರಹಣ ಮಾಡಲು ಬಂದ ಕೌರವ ರನ್ನು ಯುದ್ಧದಲ್ಲಿ ಪಾಂಡವರು ಜಯಿಸಿದರು. ವಿರಾಟ್ರಾಯನಿಂದ ಪಾಂಡ ವರು ಪೂಜಿತರಾದರು. ಬಳಿಗೆ ಬಂದ ಪಾಂಡವ ಬಂಧು ಪರಮಾತ್ಮನನ್ನು ಪರಿಪರಿಯಾಗಿ ಸ್ಮರಿಸಿ ಕೊಂಡಾಡಿದರು ; ಅಚ್ಯುತನ ದಯೆಯಿಂದ ಪಾಂಡ ವರು ಸದಾ ಸುಖಿಗಳು ; ಅಚ್ಯುತನು ನಮಗೆ ಸದಾ ರಕ್ಷಕನಾಗಿರಲಿ.

ಯತ್ಸಂಮತ್ಯಾ ಪೃಷತತನುಜಪ್ರೇಷಿತಂ
ಬ್ರಾಹ್ಮಣೋಕ್ತ್ಯಾ
ರಾಜ್ಯ ನಾದಾದನುಜಜನಿತಸ್ಯಾಂಬಿಕೇ
ಯೋಽರ್ಜುನಸ್ಯ ।
ಯಃ ಸಾಹಾಯಂ ವ್ಯಧಿತನಗರೀಂ
ಕೌರವಾಣಾಮವಾಪ್ತಃ

ಸೋ ವೋಕ್ತೇ ಕೃಷ್ಣಸ್ತದನಭಿಮತೇರಾಪ್ತಪಾರ್ಥಃ
ಸ ನೋಽವ್ಯಾತ್ ॥೨೪॥

ದ್ರುಪದ ರಾಜನ ಕಡೆಯಿಂದ ಬಂದ ವಿಪ್ರನು ಪಾಂಡವರಿಗೆ ಅವರ ರಾಜ್ಯದ ಭಾಗವನ್ನು ಕೊಡಬೇಕೆಂಬ ಹಿತವಚನವನ್ನು ಧೃತರಾಷ್ಟ್ರನು ಒಪ್ಪಲಿಲ್ಲ. ಆಗ ಶ್ರೀಕೃಷ್ಣನು ಸಂಧಾನಕ್ಕಾಗಿ ಕೌರವರಲ್ಲಿಗೆ ಬಂದನು ; ಪಾಂಡವರಿಗೆ ನ್ಯಾಯವಾಗಿ ಬರಬೇಕಾದ ಅರ್ಧ ರಾಜ್ಯವನ್ನು ಕೊಡ ಬೇಕೆಂದನು. ಕೌರವರು ಹರಿವಾಣಿಯನ್ನು ನಿರಾಕರಿಸಿದರು. ಆಗ ಶ್ರೀಹರಿ ಪಾಂಡವರ ಪಕ್ಷದಲ್ಲಿದ್ದು ಪಾರ್ಥಸಾರಥಿಯಾಗಿ ಅವರಿಗೆ ಸಹಾಯ ಮಾಡಿದನು. ಪಾರ್ಥಸಾರಥಿ ನಮಗೆ ಸದಾ ರಕ್ಷಕನಾಗಿರಲಿ !

ಸೇನಾಂ ವೀಕ್ಷ್ಯರಣೋನ್ಮುಖೇ ಕರುಣಯಾ
ಶಸ್ತ್ರೋದ್ಯತಂ ಫಾಲ್ಗುನಮ್

ಸದ್ಗೀತಾಮುಪದಿಶ್ಯ ಕಾಮ್ರ್ಮುಕಧರಂ ಚಕ್ರೇಸ್ಯ
ಯಃ ಸಾರಥಿಃ ।

ಅನ್ಯೋನ್ಯಂ ಕುರುಪಾಂಡವೈಶ್ಚ ಪೃತನಾಂ
ಯೋಜೀಘ್ನತ್ಸ್ಯಂದನಾ-

ದ್ಯೋ ಭೀಷ್ಮಂ ನಿರಪಾತಯತ್ಸ್ವತಪಸೈಃ
ಪಾಂಡೋಸ್ತ್ವಮಿಡೇಽಚ್ಯುತವ್ ॥೨೫॥

ಕುರುಕ್ಷೇತ್ರ ರಣರಂಗದಲ್ಲಿ ಮಹಾ ಸೈನ್ಯವನ್ನು ನೋಡಿ ಶಸ್ತ್ರ ಸನ್ಯಾಸ ಮಾಡಿದ ಅರ್ಜುನನಿಗೆ ಶ್ರೀಕೃಷ್ಣನು ಗೀತೋಪದೇಶವನ್ನು ಮಾಡಿದನು ; ಯುದ್ಧದಲ್ಲಿ ಪಾರ್ಥಸಾರಥಿಯಾಗಿ ಎರಡು ಪಕ್ಷಗಳ ಸೈನ್ಯನಾಶಕ್ಕೆ ಶ್ರೀಹರಿ ಕಾರಣನಾದನು. ಅರ್ಜುನನ ನಿಶಿತ ಶಸ್ತ್ರಗಳಿಂದ ಭೀಷ್ಮರನ್ನು ರಥದಿಂದ ರಣಭೂಮಿಗೆ ಇಳಿಸಿದ ಶ್ರೀಕೃಷ್ಣನನ್ನು ನಾನು ಸ್ತೋತ್ರ ಮಾಡುವೆನು !

ದ್ರೋಣೇ ಯುಧ್ಯತಿ ಪಾಂಡವೈರ್ವಿನಿಹತಂ
ಪ್ರಾಗ್ಜ್ಯೋತಿಷಂ ಪಾರ್ಥತಃ
ಕೃತ್ವಾ ತಸ್ಯ ಸುತೇ ಹತೇ ನಿಶಿ ಶಿವಂ ನೀತ್ವಾರ್ಜುನಂ
ಸೈಂಧವಮ್ ।

ತದ್ದತ್ತಾಸ್ತ್ರಬಲಾದಜೀಘನದತೋ ದ್ರೋಣೇ ಹತೇ
ದ್ರೌಪದೇ-

ಯೋಗ್ಯ ಭೀಮಂ ಚ ನಿಜಾಸ್ತ್ರನವ್ಯುಮಕರೋತ್ತಂ
ನೌಮಿ ನಾರಾಯಣಮ್ ॥೨೬॥

ಕುರುಕ್ಷೇತ್ರದಲ್ಲಿ ದ್ರೋಣಾಚಾರ್ಯರು ಪಾಂಡವರ ಸಂಗಡ ಯುದ್ಧ ಮಾಡುತ್ತಿರಲು ಶ್ರೀಹರಿ ಅರ್ಜುನನಿಂದ ನರಕಾಸುರನ ಮಗನಾದ ಭಗದತ್ತನನ್ನು ಕೊಲ್ಲಿಸಿದನು. ಪದ್ಮವ್ಯೂಹದಲ್ಲಿ ಪಾರ್ಥಪುತ್ರ ಅಭಿಮನ್ಯುವು ಹತನಾದನು. ಶ್ರೀಹರಿ ಅರ್ಜುನನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ರುದ್ರದೇವರಿಂದ ಪಾಶುಪತಾಸ್ತ್ರವನ್ನು ಕೊಡಿಸಿದನು; ರುದ್ರದೇವರ ಅಸ್ತ್ರದಿಂದ ಸೈಂಧವನ ಸಂಹಾರವಾಯಿತು. ದ್ರೋಣಾಚಾರ್ಯರು ಧೃಷ್ಟದ್ಯುಮ್ನನಿಂದ ಹತರಾದರು. ಅಶ್ವತ್ಥಾಮಾಚಾರ್ಯರು ಬಿಟ್ಟ ನಾರಾಯಣಾಸ್ತ್ರಕ್ಕೆ ಮನ್ನಣೆ ನೀಡಲು ಶ್ರೀಹರಿ ಭೀಮಸೇನ ದೇವರಿಗೆ ಸೂಚಿಸಿದರು. ಅಂತಹ ಶ್ರೀಹರಿಯನ್ನೇ ನಾನು ಸ್ತೋತ್ರ ಮಾಡುತ್ತೇನೆ !

ಯತ್ಸಾಮರ್ಥ್ಯಬಲೇನ ಸೂರ್ಯತನುಜೇ ಪಾರ್ಥೇನ ಯುದ್ಧೇ ಜಿತೇ
ಪಶ್ಚಾತ್ ಶಲ್ಯಮವಾಪ್ಯ ಸಾರಥಿವರಂ ಧರ್ಮಾತ್ಮಜಂ
ಸಾಂಯುಕ್ಯೈಃ ।
ಶೀರ್ಣಾಂಗಂ ಕೃತವತ್ಯಮುಂ ಶಿಬಿರಗಂ ಪಾರ್ಥಂ
ಚ ಮೃತ್ಯೋಃ ರಸಾ-

ದ್ಯಃ ಪಾರ್ಥೇನ ಹತೇ೭ರ್ಕಜೇ ನೃಪನುತಃ ಪಾಯಾತ್ಸ
ನಃ ಕೇಶವಃ ॥೨೭॥

ಶ್ರೀ ಹರಿಯ ಬಲದಿಂದ ಪಾರ್ಥನು ಯುದ್ಧದಲ್ಲಿ ಕರ್ಣನನ್ನು ಜಯಿಸಿದನು. ಆದರೆ ಶಲ್ಯ ಸಾರಥ್ಯ ಚಾತುರ್ಯದಿಂದ ಕರ್ಣನು ಧರ್ಮರಾಯನನ್ನು ಶಿಥಿಲಾಂಗನನ್ನಾಗಿ ಮಾಡಿದನು. ಆಗ ಧರ್ಮಜನು ಶಿಬಿರಕ್ಕೆ ತೆರಳಿದನು. ಸೂರ್ಯಸುತನು ಬಿಟ್ಟ ಸರ್ಪಾಸ್ತ್ರದಿಂದ ಸವ್ಯಸಾಚಿಯನ್ನು ಶ್ರೀಹರಿ ಸಂರಕ್ಷಿಸಿದನು. ಆಗ ಧರ್ಮರಾಯನು ಶ್ರೀಕೃಷ್ಣನನ್ನು ಕೊಂಡಾಡಿದನು. ಪಾಂಡವಾಗ್ರಜನಿಂದ ಪ್ರಶಂಸಿತನಾದ ಪದ್ಮನಾಭನು ನಮಗೆ ಸದಾ ರಕ್ಷಕನಾಗಿರಲಿ !

ಕಲ್ಯೇ ಧರ್ಮಸುತಾದ್ಭತೇ ಕುರುಬಲೇ ಪಾರ್ಥೈಃ
ಸಮಸ್ತೇ ಹತೇ

ಭೀಮೇನಾರ್ಜುನಸಂಯುತೇ ವಿನಿಹತೇ
ದುರ್ಯೋಧನೇ ದ್ರೌಣಿನಾ-

ಸುಪ್ತಾನಾಂ ನಿಧನೇ ಕೃತೇ ನಿಶಿ ತತೋ
ಮುಕ್ತ್ವಾ ವಿಧೇರಸ್ತ್ರತಃ

ಪಾರ್ಥಾನಾಜ್ಯಮಿತಾಂಶ್ಚ ತತ್ಸುತಸುತಂ
ಯೋಽಪಾತ್ಸನೋವ್ಯಾದ್ಧರಿಃ ॥೨೪॥

ಯುದ್ಧದಲ್ಲಿ ಧರ್ಮರಾಯನಿಂದ ಶಲ್ಯನು ಹತನಾದನು. ಕೌಂತೇಯನಿಂದ ಕುರುಸೈನ್ಯವು ನಾಶವಾಯಿತು. ದುರ್ಯೋಧನನನ್ನು ಆವನ ತಮ್ಮಂದಿರನ್ನು ಭೀಮಸೇನದೇವರು ಗದೆಯಿಂದ ಕೊಂದು ಬಿಸುಟಿದರು. ಶಿಬಿರದಲ್ಲಿ ಮಲಗಿದ್ದ ಪಾಂಡವರ ಮಕ್ಕಳನ್ನು ಅಶ್ವತ್ಥಾಮರು ಕೊಂದರು. ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು. ಪಾಂಡವರಿಗೆ ರಾಜ್ಯವನ್ನನುಗ್ರಹಿಸಿದ ಶ್ರೀಹರಿ ಪಾರ್ಥನ ಮೊಮ್ಮಗನಿಂದ ಪರೀಕ್ಷಿತನನ್ನು ಅಶ್ವತ್ಥಾಮರ ಬ್ರಹ್ಮಾಸ್ತ್ರವು ಗರ್ಭದಲ್ಲಿರುವ ಶಿಶುವನ್ನೇ ಕಾಡಿತು; ಆದರೆ ಶ್ರೀಹರಿ ಆ ಶಿಶುವನ್ನು ಸಂರಕ್ಷಿಸಿದನು. ಜಗದ್ರಕ್ಷಕನಾದ ಶ್ರೀಹರಿ ನಮ್ಮನ್ನು ಸದಾ ಕಾಪಾಡಲಿ!

ಕೃಷ್ಣಾಭ್ಯಾಮುಪಿ ಭೂಸುರೈನೃಪಸುತೇ
ರಾಜ್ಯಾಭಿಷಿಕ್ತೋ ದ್ವಿಜೈ-
ರ್ದರ್ಗ್ಧೇ ನಿಂದತಿ ಭಿಕ್ಷುಕೇ ಖಲತರೇ ಸ್ವಂ
ಪ್ರತ್ಯತೀಸಾರತಃ ।
ರಾಜ್ಯಂ ತ್ಯಕ್ತುಮನಾಥ ತೇ ವಚನತೋ
ಯಸ್ಯಾಪ್ತ ಭೀಷ್ಮಸ್ತತಃ
ಶುಶ್ರಾವಾಖಿಲಧರ್ಮನಿರ್ಣಯಮದಃ ಕೃಷ್ಣದ್ವಯಂ
ಧೀಮಹಿ ॥೨೯॥

ವಿಪ್ರವರರಿಂದ ಕೂಡಿದ ವಾಸಿಷ್ಠಕೃಷ್ಣ ಮತ್ತು ಯಾದವಕೃಷ್ಣ ಇಬ್ಬರ ಕೃಷ್ಣರ ನೇತೃತ್ವದಲ್ಲಿ ಧರ್ಮರಾಯನಿಗೆ ಪಟ್ಟಾಭಿಷೇಕವಾಯಿತು. ದುರ್ಯೋಧನನ ಪಕ್ಷದವನಾದ ಚಾರ್ವಾಕನೆಂಬ ಭಿಕ್ಷುಕ ರೂಪದ ಅಸುರನು ವಿಪ್ರಶಾಪದಿಂದ ಮೃತನಾದನು. ರಣದಲ್ಲಿ ಬಂಧುಮಿತ್ರರನ್ನು ಕಳೆದುಕೊಂಡು ಪ್ರಾಪ್ತವಾದ ರಾಜ್ಯವನ್ನು ಪಾಲಿಸಲು ಮನಸ್ಸಿಲ್ಲದೇ ಧರ್ಮರಾಯನು ಪಶ್ಚಾತ್ತಾಪ ಬುದ್ಧಿಯಿಂದ ತನಗೆ ರಾಜ್ಯವೇ ಬೇಡವೆಂದನು–ಅಂತಹ ಧರ್ಮರಾಯನಿಗೆ ಶ್ರೀಹರಿ ಭೀಷ್ಮರಿಂದ ಧರ್ಮೋಪದೇಶ ಮಾಡಿಸಿದನು ವಾಸಿಷ್ಠಕೃಷ್ಣ ಮತ್ತು ಯಾದವ ಕೃಷ್ಣ ಇಬ್ಬರು ಕೃಷ್ಣರನ್ನು ಧ್ಯಾನಿಸುವೆನು.

ಸ್ಮೃತ್ವಾ ಯುಂ ದ್ಯುಸರಿತ್ಸುತೋ ವಸುರಭೂದ್ರಾಜ್ಯಂ
ಯದಾ ಶಾಶಿತೋ

ನಿರ್ದುಃಖೋಽಥ ಜುಗೋಪ ಧರ್ಮನಿರತೋ ಜಿತ್ವಾ
ಸ್ವರಾಜ್ಯಂ ಕಲಿಮ್ ।

ಯುಃ ಪಾರ್ಥಂ ಸಮುಬೋಧಯನ್ಮೃತಶಿಶುಂ
ಯೋ ಜೀವಯುತ್ವಾಂಡವೈ-

ರ್ಯೋ ಯಜ್ಞಂ ಸಮಕಾರಯದ್ಬಹುಧನೈರ್ಧಾರ್ಯ-
ಯಾಮಿ ತಂ ಕೇಶವಮ್ ॥೩೦॥

ಗಂಗಾಪುತ್ರರಾದ ಭೀಷ್ಮರು ಶ್ರೀಹರಿಸ್ಮರಣೆ ಮಾಡುತ್ತಾ ಮೂಲರೂಪ (ವಸುರೂಪ)ದಲ್ಲಿ ಐಕ್ಯವಾದರು. ಬಳಿಕ ಶ್ರೀಕೃಷ್ಣನ ಸಾಂತ್ವನ ವಚನಗಳಿಂದ ಧರ್ಮರಾಯನು ದುಃಖ ದೂರನಾದನು. ರಾಜ್ಯಪಾಲನೆ ಮಾಡಿದನು. ಪಾರ್ಥನಿಗೆ ಗೀತೋಪದೇಶ ಮಾಡಿದ ಶ್ರೀಕೃಷ್ಣನು ಉತ್ತರೆಯ ಗರ್ಭದಲ್ಲಿದ್ದ ಅರ್ಭಕನನ್ನು ಬ್ರಹ್ಮಾಸ್ತ್ರದಿಂದಲೂ ಸಾಯದಂತೆ ಸಂರಕ್ಷಿಸಿದನು. ಆ ಶಿಶುವು ಜನನಕಾಲಕ್ಕೆ ಮೃತವಾಯಿತು. ಆಗ ಅದನ್ನು ಶ್ರೀಹರಿ ಬದುಕಿಸಿದನು. ಶ್ರೀಹರಿ ಪಾಂಡವರಿಂದ ಅಶ್ವಮೇಧಾದಿ ಯಾಗಗಳನ್ನು ಮಾಡಿಸಿದನು. ಸರ್ವ ಸಮರ್ಥನಾದ ಶ್ರೀಹರಿಯನ್ನು ನಾನು ಧ್ಯಾನಿಸುತ್ತೇನೆ.

ಯದ್ಯುಕ್ತಾಃ ಪಾಂಡುಪುತ್ರಾಃ ಕ್ಷಿತಿಮಥಜುಗು-
ಪುರ್ಧರ್ಮರಾಜಂ ಸ್ವರಾಜ-

ಧರ್ಮೇ ಯುತ್ಪ್ರೀತಯೇಽಭೂತ್ಪವನಜವಜನೈರಾಂಬಿ-
ಕೇಯಂ ವಿರಕ್ತಾವ್ ।

ವ್ಯಾಸಾತ್ಮಾ ಯೋ ವನಸ್ಥಂ ತ್ವಕೃತ ನಿಜಮನೋ-
ಭೀಷ್ಟವಂತಂ ಗತಂ ಸ್ವಮ್

ನಾಥಂ ಪಾರ್ಥಾಃ ಸ್ಮರಂತೋ ಮುಮುದುರಪಿ ಪದಂ
ಧುಸ್ಯ ಕೃಷ್ಣಂ ತವೀಡೇ ॥೩೧॥

ಪಾಂಡವರು ಶ್ರೀ ಕೃಷ್ಣನ ದಯದಿಂದ ಹರಿಯ ನೇತೃತ್ವದಲ್ಲಿ ರಾಜ್ಯ ವಾಳಿದರು. ಧರ್ಮರಾಯನು ಶ್ರೀಹರಿಪ್ರೀತಿಗಾಗಿ ಧರ್ಮದಲ್ಲಿ ರತನಾಗಿ ರಾಜ್ಯ ವಾಳಿದನು. ಭೀಮಸೇನ ದೇವರ ನಿಷ್ಠುರ ವಚನಗಳನ್ನಾಲಿಸಿ ವಿರಕ್ತನಾಗಿ ಧೃತರಾಷ್ಟ್ರನು ವನವಾಸಕ್ಕೆ ತೆರಳಿದನು. ಅನಿಲಪುತ್ರನ ದಯೆಯಿಂದ ಅಂಧ ರಾಜನ ಆತ್ಮೋದ್ಧಾರವಾಯಿತು. ವಾಸಿಷ್ಟ ಕೃಷ್ಣನು ಧೃತರಾಷ್ಟ್ರನನ್ನು ಗಂಧರ್ವಲೋಕದಲ್ಲಿರಿಸಿದನು. ರಾಜ ಸೂಯಾರ್ದಿ ಯಾಗಗಳನ್ನು ಮುಗಿಸಿ ಕೊಂಡು ಶ್ರೀಕೃಷ್ಣನು ಹಸ್ತಿನಾವತಿಯಿಂದ ದ್ವಾರಕಾನಗರಕ್ಕೆ ಮರಳಿದನು. ಶ್ರೀಹರಿಯ ದಯದಿಂದ ಪಾಂಡವರು ಸುಖವಾಗಿ ರಾಜ್ಯಪಾಲನೆ ಮಾಡಿದರು. ನಿಶ್ಚಿಂತೆಯಿಂದಿದ್ದರು. ದಯಾಮಯನಾದ ದಾಮೋದರನನ್ನು ನಾನು ಗುಣ ಗಾನ ಮಾಡುವೆನು.

ಯೋ ಯುಷ್ಮಾ ವಿಪ್ರಶಾಪಾದ್ಯದುಕುಲಮುವಧೀ
ದರ್ಧಿತೋಗಾತ್ಸ್ವಲೋಕಮ್
ದೇವೈರ್ಭಿರ್ಷ್ಮಾದ್ಯುಪೇತ್ಯೆರ್ಯದನುನಿಜಪದಂ
ಪಾಂಡವಾ ಅಷ್ಯವಾಪುಃ ।
ದೈತ್ಯಾ ಯದ್ದ್ವೇಷತೋಂಧೇ ತಮಸಿ ನಿಪತಿತಾ
ಬುದ್ಧರೂಪೋಭವದ್ಯಃ
ಕಲ್ಕ್ಯಾತ್ಮಾಂತೇ ಕಲೇರ್ಯಃ ಕುಜನನಿಧನಕೃತ್ಪಾತು
~~ಸೋಸ್ಮಾನ್ಮುಕುಂದಃ~~ ॥೩॥

ಶ್ರೀಕೃಷ್ಣನು ಹನ್ನೆರಡು ವರ್ಷಗಳ ಕಾಲ ಯಾಗಗಳನ್ನು ಮಾಡಿದನು. ಗರ್ಗ್ಯಮುನಿಗಳ ಬ್ರಾಹ್ಮಣ ಶಾಪವನ್ನೇ ನೆಪಮಾಡಿ ಶ್ರೀಹರಿ ಯದುಕುಲ ನಾಶಕ್ಕೆ ಕಾರಣನಾದನು. ಶ್ರೀಹರಿಯ ಅವತಾರಕಾರ್ಯಗಳು ಮುಗಿದವು. ವೈಕುಂಠವನ್ನು ಸೇರಬೇಕೆಂಬ ದೇವತೆಗಳ ಬಿನ್ನಪವನ್ನು ಶ್ರೀಹರಿ ಮನ್ನಿಸಿದನು ರುಕ್ಮಿಣೀ ಸತ್ಯಭಾಮಾ ಸಮೇತನಾಗಿ ಶ್ರೀಹರಿ ಪರಂಧಾಮಕ್ಕೆ ತೆರಳಿದನು. ಬಳಿಕ ಪಾಂಡವರು ತಮ್ಮ ತಮ್ಮ ಮೂಲರೂಪಗಳಲ್ಲಿ ಐಕ್ಯವಾದರು. ಆಗ ಶ್ರೀಹರಿ ವಿಷ್ಣು ವೈಷ್ಣವ ವಿದ್ವೇಷಿಗಳನ್ನು – ದೈತ್ಯರನ್ನು ತಮಸ್ಸಿಗೆ ಕಳಿಸಲೋಸುಗ ಬುದ್ಧಾವತಾರ ಮಾಡಿದನು. ಕಲಿಯುಗಾಂತ್ಯದಲ್ಲಿ ಕಲ್ಕಿ - ರೂಪವನ್ನು ಧರಿಸಿ ಕುಜನರನ್ನು ಕೊಂದು ಬಿಸುಟುವನು. ಆ ಮುಕುಂದನೇ ನಮಗೆ ರಕ್ಷಕನು.

ಮಹಾಭಾರತತಾತ್ಪರ್ಯನಿರ್ಣಯಾರ್ಥಸ್ಯ ಸಂಗ್ರಹಃ॥
ರಾಘವೇಂದ್ರೇಣ ಯತಿನಾಕೃತಃ ಸಜ್ಜನ
ಸಂವಿದೇ ॥೩೩॥

ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯ ಭಾವಸಂಗ್ರಹವೆಂಬ ಕೃತಿಯು ಸಜ್ಜನರ ಜ್ಞಾನಾಭಿವೃದ್ಧಿಗಾಗಿ ರಾಘವೇಂದ್ರತೀರ್ಥರಿಂದ ರಚಿತವಾಗಿದೆ.

— ಶ್ರೀ ಕೃಷ್ಣಾರ್ಪಣಮಸ್ತು —